ತೆಗೆದುಕೊಳ್ಳಲು ಸಾಧ್ಯವಿಲ್ಲ.

2. ಕೆಲವು ಕೈಗಾರಿಕೆಗಳು ಬಾಕಿ ಹಣದ ಬಗ್ಗೆ ಮೇಲ್ಮನವಿಗಳನ್ನು ಸಲ್ಲಿಸಿದ್ದಾರೆ. ಮೇಲ್ಮನವಿಗಳನ್ನು ವಿಚಾರಣೆ ಮಾಡಿ, ತೀರ್ಮಾನ ತೆಗೆದುಕೊಂಡ ನಂತರ ಮುಂದಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಸಾಮಾನ್ಯವಾಗಿ ಮಂಡಳಿಯು ಕೆ. ಇ. ಬಿ. ( ರಿಕವರಿ ಆಫ್ ಡ್ಯೂಸ್ ) ಆಕ್ಟ್ 1978 ಮತ್ತು ಕೆ. ಇ. ಬಿ. ( ರಿಕವರಿ ಆಫ್ ಡ್ಯೂಸ್ ) ರೂಲ್ಸ್ 1978 ಹಾಗೂ ಕೆ. ಇ. ಬಿ. ಸಪ್ಲೈ ರೆಗ್ಯೂಲೇಷನ್ಸ್ ಪ್ರಕಾರ ಬಾಕಿ ವಸೂಲಾತಿಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಕೆಲವು ಕೈಗಾರಿಕೆಗಳು ಕಂತಿನಲ್ಲಿ ಬಾಕಿ ಹಣವನ್ನು ಪಾವತಿ ಮಾಡಲು ಮಾಡಿದ್ದ ಮನವಿಯನ್ನು ಪರಿಗಣಿಸಿ ಕಂತುಗಳಲ್ಲಿ ಬಾಕಿಯನ್ನು ತೀರಿಸಲು ಅವಕಾಶ ನೀಡಲಾಗಿದೆ.

ವಿಷಯ : ಮೈಸೂರು - ಬೆಂಗಳೂರು ರಸ್ತೆಯ ಆಧುನೀಕರಣ.

Q : 44

**ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜ) :** ಮಾನ್ಯ ಲೋಕೋಪಯೋಗಿ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು- ಬೆಂಗಳೂರು ರಸ್ತೆಯನ್ನು ಪ್ರಸಕ್ತ ಸಂಚಾರದ ಒತ್ತಡಕ್ಕೆ ಅನುಗುಣವಾಗಿ ಆಧುನೀಕರಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಆ) ಮೈಸೂರು ಮತ್ತು ಬೆಂಗಳೂರು ರಸ್ತೆಯ ನವೀಕರಿಸುವ ಬಗ್ಗೆ ಸರ್ಕಾರದವರು ಎಷ್ಟು ಸಾರಿ ಹೇಳಿಕೆ ನೀಡಿರುವುದು?

**ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :**

ಅ) ಬೆಂಗಳೂರು - ಮೈಸೂರು ರಸ್ತೆಯಲ್ಲಿನ ಸಂಚಾರ ದಟ್ಟಣೆಯನ್ನು ಗಮನಿಸಿ ಅತಿ ಅವಶ್ಯವಿರುವ ಭಾಗಗಳಲ್ಲಿ (ಕಿ .ಮಿ. 33ರಿಂದ 46, 74.55 ರಿಂದ 75.80, 89.40 ರಿಂದ 111. 20, 118.50 ರಿಂದ 124.80) ರಸ್ತೆ ಅಗಲಪಡಿಸುವುದೂ, ತಿರುವುಗಳನ್ನು ನೇರಪಡಿಸುವುದು, ಅತಿ ಹೆಚ್ಚು ಸಂಚಾರ ಸಾಂದ್ರತೆ ಇರುವ ಕಡೆ ಜೋಡಿ ರಸ್ತೆ ಮಾಡುವುದು, ಇವುಗಳನ್ನು ಮಾಡಲಾಗುತ್ತಿದೆ. ಅಲ್ಲದೆ, 20 ಲಕ್ಷ ರೂ.ಗಳ ವೆಚ್ಚದಲ್ಲಿ ಸೂಚನಾ ಫಲಕಗಳು, ರಸ್ತೆ ವಿಭಜಕ ಪ್ರತಿಫಲನ ಸಲಕರಣೆಗಳನ್ನು ಅಳವಡಿಸಲು, ಅಂದಾಜನ್ನು ಮಂಜೂರು ಮಾಡಲಾಗಿದೆ. ಬೆಂಗಳೂರು- ಮೈಸೂರು ಮಧ್ಯೆ ಒಂದು ಪ್ರತ್ಯೇಕ ವೇಗದ ಹೆದ್ದಾರಿಯನ್ನು ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಬೆಂಗಳೂರು- ಮೈಸೂರು ಮಾರ್ಗವಾಗಿ ಕೇರಳ ರಾಜ್ಯದ ತಲ್ಲಿಚೇರಿಯನ್ನು ಸೇರುವ

ಅಂತರ ರಾಜ್ಯ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾಪವು ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ : ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ಆಗುತ್ತಿರುವ ಏರಿಳಿತ.

Q : 219

ಶ್ರೀ ಗುರುಪಾದಪ್ಪ ನಾಗ್ಮಾರಪಳ್ಳಿ ( ಔರಾದ್ ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ತೀವ್ರವಾದ ಕಡಿತ ಹಾಗೂ ಏರಿಳಿತ ಸಂಭವಿಸುತ್ತಿರುವುದರಿಂದ ರೈತರಿಗೆ ಹಾಗೂ ಸಾಮಾನ್ಯ ಜನರಿಗೆ ತೊಂದರೆಯಾಗುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ?

ಆ) ಹಾಗಿದ್ದಲ್ಲಿ, ಈ ತೊಂದರೆಯನ್ನು ತಪ್ಪಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಗ್ರಾಮಾಂತರ ಪ್ರದೇಶಗಳಲ್ಲಿ ಕೃಷಿ ಪಂಪ್‌ಸೆಟ್‌ಗಳಿಂದ ಬೇಡಿಕೆ ಬಹಳ ತೀವ್ರ ಹೆಚ್ಚಿರುವುದರಿಂದ ಈ ವಿದ್ಯುತ್ ಬೇಡಿಕೆಯನ್ನು ವಿದ್ಯುತ್ ಲಭ್ಯತೆಯೊಂದಿಗೆ ಸರಿದೂಗಿಸುವ ಸಲುವಾಗಿ ಮಂಡಳಿಯು ರಾಜ್ಯಾದ್ಯಂತ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತಿ ದಿವಸ 6 ಘಂಟೆಗಳ ಅವಧಿಯ ನಿಯಮಿತ ಲೋಡ್ ಷೆಡ್ಡಿಂಗ್ ಅನ್ನು ಸೆಪ್ಟೆಂಬರ್ 1992ರಿಂದ ಜಾರಿಗೊಳಿಸಲಾಗಿದೆ. ಇದು ಅನಿವಾರ್ಯ ಇಲ್ಲದಿದ್ದರೆ ಇಡೀ ವಿದ್ಯುತ್ ವ್ಯವಸ್ಥೆಯೇ ಕುಸಿಯುವ ಸಂಭವವುಂಟು. ಈ ವಿಷಯದಲ್ಲಿ ಎಲ್ಲಾ ಗ್ರಾಹಕರ ಸಹಕಾರ ಅತ್ಯಗತ್ಯ.

ಆ) ಹೆಚ್. ಟಿ. ಕೈಗಾರಿಕೆಗಳಿಗೆ ವಿದ್ಯುತ್ ಕಡಿತವನ್ನು ವಿಧಿಸಲಾಗಿದೆ. ಸಾಯಂಕಾಲದ ಒತ್ತಡದ ಸಮಯದಲ್ಲಿ ಸಂಜೆ 6-00 ಘಂಟೆಯಿಂದ ರಾತ್ರಿ 9-00 ಘಂಟೆಯವರೆಗೆ ವಿದ್ಯುತ್ ಅನ್ನು ಬಳಸದಂತೆ ಕೈಗಾರಿಕೆಗಳಿಗೆ ನಿರ್ಬಂಧ ವಿಧಿಸಲಾಗಿದೆ. ಪ್ರತಿ ವರ್ಷವೂ ಮಂಡಳಿಯು ಹೊಸ ವಿದ್ಯುತ್ ಪ್ರಸರಣಾ ಮಾರ್ಗಗಳನ್ನು ಮತ್ತು ಹೊಸ ವಿದ್ಯುತ್ ಕೇಂದ್ರಗಳನ್ನು ನಿರ್ಮಿಸುತ್ತಿದೆ. ವಿತರಣೆ ವ್ಯವಸ್ಥೆಯಲ್ಲಿ ಕೆಪಾಸಿಟರ್ ಬ್ಯಾಂಕ್‌ಗಳನ್ನು ಅಳವಡಿಸುವುದು, (ಹೊಸ ಎಕ್ಸ್‌ಪ್ರೆಸ್ ಫೀಡರ್‌ಗಳನ್ನು ಹಾಕುವುದು) ಹೆಚ್ಚುವರಿ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಹಾಕುವುದು ಇತ್ಯಾದಿ ಸುಧಾರಣಾ ಕಾರ್ಯಗಳನ್ನು ತೆಗೆದುಕೊಳ್ಳಲಾಗುತ್ತಿದೆ.